# *4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ಮೈಸೂರು*

ಎಸ್‌ಸಿ. 110/2017

| | | | | | |
|---|---|---|---|---|---|
| ಸಾಕ್ಷಿದಾರರ ಹೆಸರು | ಃ | ಶ್ರೀ ರಾಜು | ಪ್ರಮಾಣ ಮಾಡಿಸಿದ ದಿನಾಂಕಃ | | |
| ತಂದೆ/ಗಂಡನ ಹೆಸರು | ಃ | ಶ್ರೀ ಸಿದ್ದರಾಜು | 27.02.2025 | | |
| ವಯಸ್ಸು | ಃ | 38 ವರ್ಷ | | | |
| ವೃತ್ತಿ | ಃ | ಪಿ.ಎಸ್.ಐ, ಎನ್.ಆರ್. ಪೋಲೀಸ್ ಠಾಣೆ | ಪ್ರಾ.ಸಾ. | ಃ | 33 |
| ವಾಸಸ್ಥಳ | ಃ | ಮೈಸೂರು | ಚಾ.ಸಾ. | ಃ | 47 |

**ಮುಖ್ಯ ವಿಚಾರಣೆ ಃ ಸರ್ಕಾರಿ ಅಭಿಯೋಜಕರಿಂದಃ**

. ನಾನು *2016* ಅಕ್ಟೋಬರ್ ತಿಂಗಳಿಂದ *2017* ಜುಲೈ ತಿಂಗಳವರೆಗೆ ವಿ.ವಿ.ಪುರಂ ಪೋಲೀಸ್ ಠಾಣೆಯಲ್ಲಿ Probationary PSI ಆಗಿ ಕೆಲಸ ಮಾಡಿದ್ದೇನೆ. ದಿಃ*23.12.2016* ರಂದು ವಿ.ವಿ.ಪುರಂ ಪೋಲೀಸ್ ಠಾಣೆಯ ಮೊ.ಸಂಖ್ಯೆ *142/2016* ಪ್ರಕರಣದಲ್ಲಿ ಪಿ.ಐ ಜೊತೆ ಕೃತ್ಯ ನಡೆದ ಸ್ಥಳಕ್ಕೆ ಹೋಗಿ ಪಿ.ಐ ರವರು ಹೇಳಿದಂತೆ ಮತ್ತು ಪಂಚರು ಹೇಳಿದಂತೆ ಪಂಚನಾಮೆಯನ್ನು ಕೈ ಬರಹದಲ್ಲಿ ಬರೆದಿದ್ದೆ. ಈಗ ನಾನು ನೋಡುತ್ತಿರುವ ನಿ.ಪಿ-*2* ಆ ಕಾಲಕ್ಕೆ ನಾನು ಬರೆದಿದ್ದ ಮಹಜರ್ ಇದೆ. ಆ ಮಹಜರ್ ಕಾಲಕ್ಕೆ ನೆಲದ ಮೇಲೆ ಬಿದ್ದಿದ್ದ ರಕ್ತ ಕಲೆ ಇದ್ದ ಮಣ್ಣನ್ನು, ಮೆದುಳಿನ ಎರಡು ಚೂರು, ರಕ್ತದ ಕಲೆ ಇಲ್ಲದ ಮಾದರಿ ಮಣ್ಣು, ಕಾಂಪೌಂಡ್ ಗೋಡೆಯ ಬಣ್ಣದ ಪುಡಿ, ರಕ್ತದ ಕಲೆ ಇರುವ ಲಾಂಗ್ ನ ಮರದ ಹಿಡಿಕೆ, ಎರಡು ಅಡಿ ಉದ್ದದ ರಕ್ತದ ಕಲೆಯಿರುವ ಕಬ್ಬಿಣದ ಲಾಂಗ್, ಕೆಂಪು ಬಣ್ಣದ *10* ಇಂಚು ಅಳತೆಯ ಎರಡು ಚಪ್ಪಲಿಗಳು,

ಕಪ್ಪು ಬಣ್ಣದ ***PUMA*** ಕಂಪನಿಯ ಹತ್ತು ಇಂಚು ಅಳತೆಯ ಎಡ ಕಾಲಿನ ಚಪ್ಪಲಿ, ತಿಳಿ ನೀಲಿ ಬಣ್ಣದ ***PUMA*** ಕಂಪನಿಯ ಹತ್ತು ಇಂಚು ಅಳತೆಯ ರಕ್ತದ ಹತ್ತಿದ ಬಲ ಕಾಲಿನ ಚಪ್ಪಲಿ, ದ್ವಿಚಕ್ರ ವಾಹನದ ಮುಂಭಾಗದ ಅಲ್ಲಲ್ಲಿ ರಕ್ತದ ಕಲೆಯಾದ ಹೆಡ್ ಲೈಟ್, ದ್ವಿಚಕ್ರ ವಾಹನದ ಎಡಭಾಗದ ಇಂಡಿಕೇಟರ್, ಹೆಲ್ಮೆಟ್ ನ ಒಡೆದಿರುವ ಫೈಬರ್ ಗಾಜಿನ *3* ಚೂರುಗಳು, ಕಪ್ಪು ಬಣ್ಣದ ಆರ್ ಸ್ಟಾರ್ ಎಂದು ಬರೆದಿರುವ ಜಖಂ ಗೊಂಡ ಹೆಲ್ಮೆಟ್, ಕೆಎ-*09*-ಹೆಚ್ ಬಿ-*2770* ಸಂಖ್ಯೆಯ ಒಂದು ಜಖಂಗೊಂಡ ದ್ವಿಚಕ್ರ ವಾಹನವನ್ನು ಅಮಾನತ್ತು ಪಡಿಸಿಕೊಂಡಿದ್ದರು. ವಾಹನ ಬಿಟ್ಟು ಉಳಿದ ವಸ್ತುಗಳನ್ನು ಬಿಳಿ ಬಟ್ಟೆಗಳಲ್ಲಿ ಹಾಕಿ ಪ್ರತ್ಯೇಕವಾಗಿ ಸೀಲ್ ಮಾಡಿದ್ದರು. ಆ ದಿನ ಅಮಾನತ್ತು ಪಡಿಸಿಕೊಂಡ ವಸ್ತುಗಳನ್ನು ನೋಡಿದರೆ ಗುರುತಿಸುತ್ತೇನೆ.

*2.* ದಿಃ*24.12.2016* ರಂದು ಪಿ.ಐ ರವರು ಆರೋಪಿತರಾದ ಹೇಮಂತ್, ಸಂಜು, ಸಂದೇಶ್. ಮೂರ್ತಿ ಮತ್ತು ಧರ್ಮೇಂದ್ರ ರವರುಗಳನ್ನು ಪತ್ತೆ ಮಾಡಿ ಹಾಜರುಪಡಿಸುವಂತೆ ನನ್ನನ್ನು ಮತ್ತು ಸಿಬ್ಬಂದಿಗಳಾದ ಚಾ.ಸಾ-*48, 54, 64, 52, 19* ಮತ್ತು *18* ರವರನ್ನು ನೇಮಿಸಿದ್ದರು. ಅದರಂತೆ ಆರೋಪಿತರನ್ನು ಅದೇ ದಿನ ಸಂಜೆ ಆ ಎಲ್ಲಾ ವ್ಯಕ್ತಿಗಳನ್ನು ರಾತ್ರಿ *9* ಗಂಟೆಗೆ ಕಾಂಟೂರ್ ರಸ್ತೆಯ ಜಂಕ್ಷನ್ ನಲ್ಲಿ ಪತ್ತೆ ಮಾಡಿ ವಶಕ್ಕೆ ಪಡೆದು ಅದೇ ದಿನ ರಾತ್ರಿ *9.15* ಗಂಟೆಗೆ ಠಾಣೆಯಲ್ಲಿ ಹಾಜರುಪಡಿಸಿದ್ದೆ. ಈ ಬಗ್ಗೆ ವರದಿ ಕೊಟ್ಟಿದ್ದೆ. ಈಗ ನಾನು ನೋಡುತ್ತಿರುವ ವರದಿ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ವರದಿಯನ್ನು ನಿ.ಪಿ-*119* ಮತ್ತು ಸಹಿಯನ್ನು ನಿ.ಪಿ-*119(ಎ)* ಎಂದು ಗುರುತಿಸಿದೆ. ಈ ದಿನ ಕೋರ್ಟ್ ಮುಂದೆ ಇರುವ *3* ರಿಂದ *5* ನೇ ಆರೋಪಿತರು ಮತ್ತು ವಿಸಿ ಮೂಲಕ ಹಾಜರುಪಡಿಸಿರುವ *1* ನೇ ಆರೋಪಿತ

ಮತ್ತು ಈ ದಿನ ಗೈರು ಹಾಜರಿರುವ ಸಂಜು ಅಲಿಯಾಸ್ ಸ್ಯಾಮ್ಸನ್ ಆ ದಿನ ನಾನು ಹಾಜರುಪಡಿಸಿದ್ದ ಆರೋಪಿತರು ಇರುತ್ತಾರೆ.

*3.* ದಿಃ*25.12.2016* ರಂದು ಪಿ.ಐ ರವರು ಮತ್ತೊಬ್ಬ ಆರೋಪಿ ಅಶೋಕ್ ರವರನ್ನು ಪತೆತ ಮಾಡಿ ಹಾಜರುಪಡಿಸುವಂತೆ ಆದೇಶ ಮಾಡಿದ್ದು ಅದೇ ದಿನ *9* ಗಂಟೆಗೆ ವಶಕ್ಕೆ ಪಡೆದು ಪಿ.ಐ ರವರ ಮುಂದೆ *9.15* ಕ್ಕೆ ಹಾಜರುಪಡಿಸಿದ್ದೆ. ಈ ದಿನ ವಿಸಿ ಮೂಲಕ ಹಾಜರುಪಡಿಸಿರುವ *7* ನೇ ಆರೋಪಿ ಅಶೋಕ್ ನಾನು ವಶಕ್ಕೆ ಪಡೆದ ಅಶೋಕ್ ಇರುತ್ತಾನೆ. ಈ ಬಗ್ಗೆ ವರದಿ ಕೊಟ್ಟಿದ್ದೆ. ಈಗ ನಾನು ನೋಡುತ್ತಿರುವ ವರದಿ ಅದೇ ಇದ್ದು ಅದರಲ್ಲಿ ನನ್ನ ಸಹಿ ಇದೆ. ಸದರಿ ವರದಿಯನ್ನು ನಿ.ಪಿ–*120* ಮತ್ತು ಸಹಿಯನ್ನು ನಿ.ಪಿ–*120(ಎ)* ಎಂದು ಗುರುತಿಸಿದೆ. ದಿಃ*27.12.2016* ರಂದು ಆರೋಪಿತಗಳಿಂದ ವಿವಿಧ ಮಾಲುಗಳನ್ನು ವಶಕ್ಕೆ ಪಡೆಯುವ ಕಾಲಕ್ಕೆ ಆರೋಪಿಗಳ ಬೆಂಗಾವಲು ಕರ್ತವ್ಯಕ್ಕೆ ನೇಮಕಗೊಂಡಿದ್ದೆ ಆ ಕಾಲಕ್ಕೆ ಪಿ.ಐ ರವರೊಂದಿಗೆ ಸಹಕರಿಸಿದ್ದೆ. ಆ ಕಾಲಕ್ಕೆ ಸತ್ತೆಗಾಲ ಬ್ರಿಡ್ಜ್, ಮಹದೇಶ್ವರ ಬೆಟ್ಟ, ಮಳವಳ್ಳಿ ರೂರಲ್ ಪೋಲೀಸ್ ಠಾಣೆಯ ವ್ಯಾಪ್ತಿಯಲ್ಲಿ ಕೃತ್ಯಕ್ಕೆ ಬಳಸಿದ ಕಾರನ್ನು ನಿಲ್ಲಿಸಿದ ಸ್ಥಳ, ಶ್ರೀರಂಗಪಟ್ಟಣ ಬ್ರಿಡ್ಜ್ ಬಳಿ ಮೊಬೈಲ್ ಬಿಸಾಕಿದ ಸ್ಥಳ ಈ *4* ಕಡೆಗಳಲ್ಲಿ ಮಹಜರ್ ಮಾಡಿದ್ದರು ಆ ಕಾಲಕ್ಕೆ ನಾನು ಹಾಜರಿದ್ದೆ.

*4.* ದಿಃ*28.12.2016* ರಂದು ಆರೋಪಿ ಸಂಜು ಅಲಿಯಾಸ್ ಸ್ಯಾಮ್ಸನ್ ಇವರ ಮಾದರಿ ಬರವಣಿಗೆಯನ್ನು ಸಂಗ್ರಹಿಸುವ ಸಲುವಾಗಿ ಮರಿಮಲ್ಲಪ್ಪ ಕಾಲೇಜಿಗೆ ಪಿ.ಐ ರವರೊಂದಿಗೆ ಭೇಟಿ ನೀಡಿ ದಾಖಲಾತಿಗಳನ್ನು ಅಮಾನತ್ತು ಪಡಿಸಿಕೊಳ್ಳುವ ಕಾಲಕ್ಕೆ ಹಾಜರಿದ್ದು ಅಮಾನತ್ತು ಮಹಜರ್ ಅನ್ನು ನನ್ನ ಕೈ ಬರಹದಲ್ಲಿ ಬರೆದಿರುತ್ತೇನೆ. ಈಗ ನಾನು ನೋಡುತ್ತಿರುವ ನಿ.ಪಿ–*89*

ಆ ಮಹಜರ್ ಇದೆ ಅದರಲ್ಲಿ ನನ್ನ ಸಹಿ ಇದೆ. ಸದರಿ ಸಹಿಯನ್ನು ನಿ.ಪಿ-*89*(ಸಿ) ಎಂದು ಗುರುತಿಸಿದೆ. ಆ ಕಾಲಕ್ಕೆ *2* ನೇ ಆರೋಪಿಯ ಕುರಿತು ಜೆಓಸಿ ಅರ್ಜಿಯನ್ನು ಅಮಾನತ್ತು ಪಡಿಸಿಕೊಂಡಿದ್ದರು. ನಂತರ ದಿಃ*30.12.2016* ರಂದು ಸಿಬ್ಬಂದಿಗಳಾದ ಮಹೇಶ್, ಕೇಶವಮೂರ್ತಿಯವರೊಂದಿಗೆ ಮಳವಳ್ಳಿ ಗ್ರಾಮಾಂತರ ಪೋಲೀಸ್ ಠಾಣೆಗೆ ಭೇಟಿ ನೀಡಿ ಠಾಣೆಯಲ್ಲಿದ್ದ ಸ್ಯಾಂಟ್ರೋ ಕಾರ್, ಎನ್.ಸಿ.ಆರ್ ಪ್ರತಿ, ಪಿ.ಎಫ್. ಪ್ರತಿ ಇವುಗಳನ್ನು ಕೇಶವ್ ಮೂರ್ತಿಯವರು ಪಡೆದುಕೊಂಡು ವಾಪಸ್ಸು ಠಾಣೆಗೆ ಬಂದು ಪಿ.ಐ ರವರಿಗೆ ಕೊಟ್ಟಿದ್ದರು.

<u>ಪಾಟೀ ಸವಾಲು ಃ 1 ಮತ್ತು 2 ನೇ ಆರೋಪಿ ಪರ ವಕೀಲರಾದ ಶ್ರೀ ವಿ.ಬಿ.ಎನ್ ರವರಿಂದಃ-</u>

*5.* ನಿ.ಪಿ-*2* ಮಹಜರ್ ನನ್ನ ಕೈ ಬರಹದಲ್ಲಿದೆ. ಪಂಚರು ಹೇಳಿದಂತೆ ಪಿ.ಐ ರವರು ನನಗೆ ಉಕ್ತಲೇಖನ ನೀಡಿದ್ದರು. ಇಬ್ಬರು ಪಂಚರ ಪೈಕಿ ಯಾರು ಮೊದಲಿಗೆ ಹೇಳಿದ್ದರು ಯಾರು ನಂತರ ಹೇಳಿದ್ದರು ಎಂದು ನೆನಪಿಲ್ಲ. ನಿ.ಪಿ-*2* ರಲ್ಲಿ ಪಂಚರು ಯಾವುದನ್ನು ಹೇಳಿ ಬರೆಸಿಲ್ಲ ಎಂದರೆ ಸರಿಯಲ್ಲ. ನಿ.ಪಿ-*2* ರಲ್ಲಿ ನನ್ನ ಕೈ ಬರಹ ಎಂದು ಬರೆದಿಲ್ಲ ಮತ್ತು ಸಹಿ ಮಾಡಿಲ್ಲ. ಆ ಕಾಲಕ್ಕೆ ನಾನು ಹಾಜರಿದ್ದ ಬಗ್ಗೆ ತನಿಖಾಧಿಕಾರಿಗೆ ದಾಖಲೆ ಕೊಟ್ಟಿಲ್ಲ. ಆ ಕಾಲಕ್ಕೆ ಹಾಜರಿದ್ದ ಪಂಚರ ಹೆಸರು ನೆನಪಿಲ್ಲ. ಆ ದಿನ ನಾನು ಆ ಸ್ಥಳಕ್ಕೆ ಹೋಗೇ ಇಲ್ಲ ಎಂದರೆ ಸರಿಯಲ್ಲ. ಠಾಣೆಯಲ್ಲೇ ನಿ.ಪಿ-*2* ಅನ್ನು ಸೃಷ್ಟಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನನಗೆ ಆರೋಪಿತರನ್ನು ಪತ್ತೆ ಹಚ್ಚಲು ಆದೇಶಿಸಿ ಮೆಮೊ ಕೊಟ್ಟಿದ್ದರು ಆದರೆ ಈಗ ದಿನಾಂಕ ನೆನಪಿಲ್ಲ. ಆ ಮೆಮೊ ಈಗ ನನ್ನ ಬಳಿ ಇಲ್ಲ. ನನಗೆ ಯಾವುದೇ ಮೆಮೊ ಕೊಟ್ಟಿಲ್ಲ ಎಂದರೆ ಸರಿಯಲ್ಲ. ಆರೋಪಿತರ ಪತ್ತೆಗಾಗಿ ನೇಮಿಸಿದ ಬಗ್ಗೆ ಠಾಣಾ ದಿನಚರಿಯಲ್ಲಿ ನಮೂದಿಸುತ್ತಾರೆ. ಆರೋಪಿತರನ್ನು ದಸ್ತಗಿರಿ ಮಾಡಿದಾಗ ನಾನು

ಆರೋಪಿತರ ಅಂಗ ಶೋಧನೆ ಮಾಡಿಲ್ಲ. ದಸ್ತಗಿರಿ ಕಾಲಕ್ಕೆ ಯಾವ ಆರೋಪಿ ಯಾವ ಬಣ್ಣದ ಬಟ್ಟೆ ಧರಿಸಿದ್ದ ಎಂದು ನೆನಪಿಲ್ಲ. ಮನೆಯಲ್ಲಿದ್ದ ಆರೋಪಿತರನ್ನು ಕರೆದುಕೊಂಡು ಬಂದು ಪೋಲೀಸ್ ಠಾಣೆಯಲ್ಲಿ ಹಾಜರುಪಡಿಸಿದ್ದೇನೆ ಎಂದರೆ ಸರಿಯಲ್ಲ. ದಿಃ*27.12.2016* ರಂದು ನನ್ನನ್ನು ಆರೋಪಿತರ ಬೆಂಗಾವಲಿಗೆ ನೇಮಿಸಿದ ಬಗ್ಗೆ ಮೆಮೊ ಕೊಟ್ಟಿರಲಿಲ್ಲ. ಆ ದಿನ ನಾನು ಆರೋಪಿತರೊಂದಿಗೆ ಎಲ್ಲಿಯೂ ಹೋಗಿಲ್ಲ ಎಂದರೆ ಸರಿಯಲ್ಲ. ದಿಃ*28.12.2016* ರಂದು ಮಾಡಿದ ಮಹಜರ್ ಕಾಲಕ್ಕೆ ಹಾಜರಿದ್ದ ಪಂಚರ ಹೆಸರು ನೆನಪಿಲ್ಲ. *2* ನೇ ಆರೋಪಿತರ ಜೆಒಸಿ ಅರ್ಜಿ ಯಾವ ದಿನಾಂಕದ್ದು ಎಂದು ನೆನಪಿಲ್ಲ. ಅದನ್ನು ಕಾಲೇಜಿನ ಪ್ರಿನ್ಸಿಪಾಲ್ ಹಾಜರುಪಡಿಸಿದ್ದರು. ಆ ದಿನ ಬೇರೆ ದಾಖಲೆಗಳನ್ನು ಕೇಳಿದ್ದರೋ ಇಲ್ಲವೊ ನೆನಪಿಲ್ಲ. ಆ ಮಹಜರ್ ಅನ್ನು ನನ್ನ ಸಮಕ್ಷಮ ಮಾಡಿಲ್ಲ ಎಂದರೆ ಸರಿಯಲ್ಲ. ಅದನ್ನು ಸಹ ಠಾಣೆಯಲ್ಲೇ ಸೃಷ್ಟಿ ಮಾಡಿದ್ದೇವೆ ಎಂದರೆ ಸರಿಯಲ್ಲ. ನನಗೆ ಈ ಪ್ರಕರಣದ ಬಗ್ಗೆ ಯಾವುದೇ ಮಾಹಿತಿ ಇಲ್ಲ ಎಂದರೆ ಸರಿಯಲ್ಲ. ಮೇಲಾಧಿಕಾರಿಗಳ ಒತ್ತಡಕ್ಕೆ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**ಪಾಟೀ ಸವಾಲು *7* ಆರೋಪಿತನ ಪರ ವಕೀಲರವರಿಂದ ಇಲ್ಲ**

***3* ರಿಂದ *6* ಮತ್ತು *8* ರಿಂದ *12* ನೇ ಆರೋಪಿತರ ಪರ ವಕೀಲರು ಈ ಮೇಲಿನಂತೆ ಪಾಟೀ ಸವಾಲನ್ನು ಅಳವಡಿಸಿಕೊಂಡಿರುತ್ತಾರೆ.**

*ಮರು ವಿಚಾರಣೆಃ- ಇಲ್ಲ.*

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

*ಓ ಹೇ ಕೇ ಸ ಇ ಎ ಒ.,*

*4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,*
ಮೈಸೂರು